ವಾಶ್ (WASH) ಕಲಿಕೆ 1

# ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ



TATA AIG INSURANCE
WITH YOU ALWAYS

Kalike
EMPOWERING PEOPLE • IMPROVING LIFE
An Initiative of TATA TRUSTS

TATA WATER MISSION
A TATA TRUSTS INITIATIVE

# ನಿರ್ಮಲ ನುಡಿ

ಕಲಿಕೆ ಸಂಸ್ಥೆಯು ಟಾಟಾ ಟ್ರಸ್ಟ್ಸ್ ನ ಅಂಗ ಸಂಸ್ಥೆಗಳಲ್ಲಿ ಒಂದಾಗಿದ್ದು ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನಲ್ಲಿ ಶಿಕ್ಷಣ, ನೀರು–ನೈರ್ಮಲ್ಯ–ಶುಚಿತ್ವ (WASH), ಶಿಶು ಅಭಿವೃದ್ಧಿ, ಜೀವನೋಪಾಯ, ಕೌಶಲಾಭಿವೃದ್ಧಿ, ಹಿರಿಯರ ಸಮಗ್ರ ಆರೈಕೆ ಮುಂತಾದ ಕ್ಷೇತ್ರಗಳಲ್ಲಿ ವಿಭಿನ್ನ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಶಾಲೆಯಲ್ಲಿ ಹಮ್ಮಿಕೊಂಡ ನೀರು, ನೈರ್ಮಲ್ಯ ಮತ್ತು ಶುಚಿತ್ವ (WASH in School) ಕಾರ್ಯಕ್ರಮವು ಮಕ್ಕಳಲ್ಲಿ ನೀರು, ನೈರ್ಮಲ್ಯ ಮತ್ತು ಶುಚಿತ್ವದ ನಿರ್ವಹಣೆಯಲ್ಲಿ ಸುಧಾರಣೆಯನ್ನು ತರುವ ನಿಟ್ಟಿನಲ್ಲಿ ಒಂದು ವಿನೂತನ ಪ್ರಯೋಗವಾಗಿದೆ. ಈ ಕಾರ್ಯಕ್ರಮದ ಮೂಲಕ ಮಕ್ಕಳು, ತಮ್ಮ ಶಾಲೆ ಮತ್ತು ಸಮುದಾಯದಲ್ಲಿ ಸ್ವಚ್ಛತೆಯ ನಿರ್ವಹಣೆಯಲ್ಲಿ ಬದಲಾವಣೆ ತಂದು, ಅದು ಸಮಾಜದ ಮೇಲೂ ಪ್ರಭಾವ ಬೀರುವುದೆಂದು ಆಶಿಸಲಾಗಿದೆ.

ಶಾಲಾ ಮಕ್ಕಳಲ್ಲಿ ನೀರು, ನೈರ್ಮಲ್ಯ ಮತ್ತು ಶುಚಿತ್ವದ ಭಾಗವಾದ ಆರೋಗ್ಯ, ಪೌಷ್ಠಿಕ ಆಹಾರ ಸೇವನೆ, ಶೌಚಾಲಯದ ಪ್ರಾಮುಖ್ಯತೆ ಮತ್ತು ನಿರ್ವಹಣೆ, ವೈಯಕ್ತಿಕ ಶುಚಿತ್ವ, ಮಳೆ ನೀರಿನ ಕೊಯ್ಲು, ಪ್ರಥಮ ಚಿಕಿತ್ಸೆ, ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ರಚನೆ ಹಾಗೂ ಘನ–ದ್ರವ ತ್ಯಾಜ್ಯ ನಿರ್ವಹಣೆ ಕುರಿತು ಜ್ಞಾನ ಮತ್ತು ಅರಿವನ್ನು ಹೆಚ್ಚಿಸಿ ಸೂಕ್ತ ಮನೊಭಾವವನ್ನು ಬೆಳೆಸಲು ಅನುಕೂಲವಾಗುವಂತೆ ಕಲಿಕೆ ಸಂಸ್ಥೆಯು ವಿಷಯವಾರು ಕೈಪಿಡಿಗಳನ್ನು ಹೊರತಂದಿದೆ. ಈ ಕೈಪಿಡಿಗಳು ಕಲಿಕೆಯು ಶಾಲೆಯಲ್ಲಿ ಹಮ್ಮಿಕೊಂಡ ನೀರು, ನೈರ್ಮಲ್ಯ– ಶುಚಿತ್ವ ಕಾರ್ಯಕ್ರಮದ ಅನುಭವದ ಅಕ್ಷರಗಳು.

ಕಲಿಕೆ WASH ತಂಡದ ಅನುಭವಗಳನ್ನು ಸರಳ ಹಾಗೂ ಸುಂದರ ಭಾಷೆಯಲ್ಲಿ ಮಕ್ಕಳು ಅರ್ಥೈಸಿಕೊಳ್ಳಲು ಅನುವಾಗುವಂತೆ ಕೈ ಪಿಡಿಯನ್ನು ಪ್ರಸ್ತುತ ಪಡಿಸಿದ ನನ್ನ ಸಹೋದ್ಯೋಗಿ ಬಂಧುಗಳಾದ ಧನರಾಜ ಚಿತ್ತಾಪುರ ಮತ್ತು ಅವರಿಗೆ ಸಾಥ್ ನೀಡಿದ ರಾಮಚಂದ್ರ ಭಟ್ಟ ಅವರಿಗೆ ಮನಃಪೂರ್ವಕ ಕೃತಜ್ಞತೆಗಳು. ಕಲಿಕೆ WASH ತಂಡವು ರಚಿಸಿದ ಕೈಪಿಡಿಯನ್ನು ಪರಿಶಿಲಿಸಿ ಸೂಕ್ತ ಸಲಹೆಯನ್ನು ನೀಡಿ ಕೈಪಿಡಿಯ ಗುಣತೂಕವನ್ನು ಹೆಚ್ಚಿಸಿದ ವಿಷಯ ತಜ್ಞರಾದ ಡಾ॥ ಪ್ರಕಾಶ್ ಭಟ್ ಇವರಿಗೆ ನಾವು ಕೃತಜ್ಞರು. ಕಲಿಕೆಯ ಈ ಪ್ರಯತ್ನದಲ್ಲಿ ಅನೇಕರು ನಮ್ಮೊಂದಿಗೆ ಕೈ ಜೋಡಿಸಿದ್ದಾರೆ, ಕಲಿಕೆ ಮಾತೃ ಸಂಸ್ಥೆಯಾದ ಟಾಟಾ ಟ್ರಸ್ಟ್ಸ್ ಮತ್ತು ಈ ಕಾರ್ಯಕ್ರಮಕ್ಕೆ ಸಹಯೋಗ ನೀಡಿದ ಆರ್ಘ್ಯಂ ಸಂಸ್ಥೆಗೆ ಕಲಿಕೆ ಆಭಾರಿಯಾಗಿದೆ. ಶಾಲೆಯಲ್ಲಿ ನೀರು, ನೈರ್ಮಲ್ಯ ಮತ್ತು ಶುಚಿತ್ವ ಕಾರ್ಯಕ್ರಮದ ರೂವಾರಿಗಳಾದ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಎಲ್ಲ ಪದಾಧಿಕಾರಿಗಳು, ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ ಬಂಧುಗಳು ಮತ್ತು ಕಾರ್ಯಕ್ರಮದ ಕೇಂದ್ರಬಿಂದುವಾದ ಶಾಲಾ ಮಕ್ಕಳಿಗೆ ಕಲಿಕೆ ಸಂಸ್ಥೆಯ ತುಂಬು ನಮನಗಳು. ಈ ಕೈಪಿಡಿಯನ್ನು ಅಂದವಾಗಿ ಮುದ್ರಣ ರೂಪದಲ್ಲಿ ಹೊರತರಲು ಸಹಕರಿಸಿದ **TATA AIG** ಸಂಸ್ಥೆಗೆ ನಾವು ಆಭಾರಿ.

ಮಕ್ಕಳು ಮತ್ತು ಶಿಕ್ಷಕರು ಈ ಕೈಪಿಡಿಗಳ ಸದುಪಯೋಗವನ್ನು ಮಾಡಿಕೊಂಡು ಶಾಲೆ ಮತ್ತು ಸಮುದಾಯದಲ್ಲಿ ನೀರು, ನೈರ್ಮಲ್ಯ ಮತ್ತು ಶುಚಿತ್ವ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಸ್ವಚ್ಛ ಭಾರತದ ಕನಸನ್ನು ನನಸುಗೊಳಿಸುವಲ್ಲಿ ಕ್ರೀಯಾಶೀಲರಾಗುವಿರೆಂಬ ಸದಾಶಯವೇ ಈ ಪ್ರಯತ್ನದ ಲಕ್ಷ್ಯ.

ಡಿ. ಶಿವಕುಮಾರ್
ಕಾರ್ಯನಿರ್ವಾಹಕ ನಿರ್ದೇಶಕರು
ಕಲಿಕೆ

# ಪರಿವಿಡಿ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1. | ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ | 1 |
| 2. | ಸಮಿತಿಯ ಉದ್ದೇಶಗಳು | 2 |
| 3. | ಶಾಲಾ ಆರೋಗ್ಯ ಮತ್ತು ನೈರ್ಯಲ್ಯ ಸಮಿತಿಯ ರಚನೆ | 2 |
| 4. | ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಜವಾಬ್ದಾರಿಗಳು | 3 |
| 5. | ಮಕ್ಕಳ ವೈಯಕ್ತಿಕ ಶುಚಿತ್ವ ಪರಿಶೀಲನಾ ನಮೂನೆ | 8 |
| 6. | ಶೌಚಾಲಯದ ಸಮರ್ಪಕ ಬಳಕೆಯ ನಿರ್ವಹಣಾ ನಮೂನೆ | 9 |

## ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ

ಮಕ್ಕಳ ಹಕ್ಕುಗಳ ಒಡಂಬಡಿಕೆಯು (United Nations Conventions on the Rights of the Child - UNCRC) ಮಕ್ಕಳ ಜೀವಿಸುವ, ರಕ್ಷಣೆಯ, ವಿಕಾಸದ ಹಾಗೂ ಭಾಗವಹಿಸುವ ಹಕ್ಕುಗಳ ಕುರಿತು ಪ್ರತಿಪಾದಿಸುತ್ತದೆ. ಇದು 1989 ರಲ್ಲಿ ರಚನೆಯಾಗಿ 1992 ರಲ್ಲಿ ವಿಶ್ವದಾದ್ಯಂತ ಜಾರಿಗೆ ಬಂತು. ಭಾರತ ಸರ್ಕಾರವೂ ಈ ಒಡಂಬಡಿಕೆಗೆ ಸಹಿ ಹಾಕಿ ಅಂಗೀಕರಿಸಿದೆ. ಹಾಗಾಗಿ ಮಕ್ಕಳ ಹಕ್ಕುಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು ಸರ್ಕಾರದ ಕರ್ತವ್ಯ ಮತ್ತು ಜವಾಬ್ದಾರಿ. ಉತ್ತಮ ಆರೋಗ್ಯ, ಸುರಕ್ಷಿತ ಕುಡಿಯುವ ನೀರು, ಸ್ವಚ್ಛ ಪರಿಸರ ಮತ್ತು ವೈಯಕ್ತಿಕ ಶುಚಿತ್ವದ ಹಕ್ಕು ಮಕ್ಕಳ ಹಕ್ಕುಗಳ ಒಡಂಬಡಿಕೆಯ ಭಾಗವಾಗಿದೆ. ಇದಲ್ಲದೆ ಈ ಒಡಂಬಡಿಕೆಯಲ್ಲಿ ಮಕ್ಕಳ ಭಾಗವಹಿಸುವಿಕೆಯ ಬಗ್ಗೆ ಚರ್ಚಿಸಿದ್ದು, ಅವರ ಅಭಿಪ್ರಾಯಕ್ಕೆ ಮನ್ನಣೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಅಗತ್ಯತೆಯನ್ನು ತಿಳಿಸುತ್ತದೆ. ಮಕ್ಕಳು ಹೊಸ ವಿಚಾರ ಮತ್ತು ತಮ್ಮ ಸುತ್ತಮುತ್ತಲು ಉಂಟಾಗುವ ಬದಲಾವಣೆಗೆ ಬಹುಬೇಗನೆ ಸ್ಪಂದಿಸುವ ಸ್ವಾಭಾವಿಕ ಗುಣಗಳನ್ನು ಹೊಂದಿರುತ್ತಾರೆ. ಆದ್ದರಿಂದ ಶಾಲೆಗಳಲ್ಲಿ ಮಕ್ಕಳನ್ನು ಕೇವಲ ಪಠ್ಯಗಳ ಕೇಳುಗರನ್ನಾಗಿಸದೆ ಒಂದು ಜವಾಬ್ದಾರಿಯುತ ಕಾರ್ಯಕ್ಕೆ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಪ್ರೇರೇಪಿಸುವ ವಾತಾವರಣವನ್ನು ನಿರ್ಮಿಸಬೇಕು.



ಶಾಲೆಯಲ್ಲಿ ಶಿಕ್ಷಕರ ಮಾರ್ಗದರ್ಶನದೊಂದಿಗೆ ನೀರು, ನೈರ್ಮಲ್ಯ ಮತ್ತು ಶುಚಿತ್ವದ ಸಂಪೂರ್ಣ ನಿರ್ವಹಣೆಗೆ ಮಕ್ಕಳೇ ನಡೆಸುವ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯು (School Health and Sanitation Committee - SH&SC) ಈ ನಿಟ್ಟಿನಲ್ಲಿ ಒಂದು ಮುಖ್ಯ ಹೆಜ್ಜೆಯಾಗಿದೆ. ಮಕ್ಕಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಮೂಲಕ ಅರಿವು, ಅಭ್ಯಾಸ (Practice) ಮತ್ತು ಜವಾಬ್ದಾರಿಯನ್ನು ಮೂಡಿಸಿ ಬದಲಾವಣೆಯ ಮುಂದಾಳುಗಳನ್ನಾಗಿ (Change Agents)ರೂಪಿಸುವುದೇ ಈ ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಪ್ರಮುಖ ಆಶಯ.

## ಸಮಿತಿಯ ಉದ್ದೇಶಗಳು

- ಮಕ್ಕಳಲ್ಲಿ ನೀರು, ನೈರ್ಮಲ್ಯ ಮತ್ತು ವೈಯಕ್ತಿಕ ಶುಚಿತ್ವದ ಕುರಿತು ಅರಿವನ್ನು ಮೂಡಿಸುವುದು,
- ಮಕ್ಕಳಲ್ಲಿ ನೀರು, ನೈರ್ಮಲ್ಯ ಮತ್ತು ವೈಯಕ್ತಿಕ ಶುಚಿತ್ವದ ಕುರಿತು ಉತ್ತಮ ಅಭ್ಯಾಸಗಳನ್ನು ರೂಢಿಗತಗೊಳಿಸಲು ಶಾಲೆಯಲ್ಲಿ ಸೂಕ್ತ ವಾತಾವರಣವನ್ನು ನಿರ್ಮಿಸುವುದು.
- ಮಕ್ಕಳಿಂದ ಮಕ್ಕಳಿಗೆ ಮತ್ತು ಮಕ್ಕಳಿಂದ ಮನೆಗೆ ನೀರು, ನೈರ್ಮಲ್ಯ ಮತ್ತು ಶುಚಿತ್ವದ ಕುರಿತು ಮಾಹಿತಿ, ಅರಿವು ಮತ್ತು ಉತ್ತಮ ಅಭ್ಯಾಸದ ಕಲಿಕೆಗೆ ಮತ್ತು ಕಲಿಕೆಯ ವರ್ಗಾವಣೆಗೆ ಅವಕಾಶಗಳನ್ನು ನಿರ್ಮಿಸುವುದು.
- ಮಕ್ಕಳಲ್ಲಿ ಭಾಗವಹಿಸುವಿಕೆ, ಸಮಸ್ಯೆ ಗುರುತಿಸುವಿಕೆ, ಸಮಸ್ಯೆ ಪರಿಹಾರ ಮತ್ತು ನಿರ್ಧಾರ ಕೈಗೊಳ್ಳುವ ಕೌಶಲಗಳನ್ನು ವೃದ್ಧಿಗೊಳಿಸುವುದು.

## ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ರಚನೆ

ಪ್ರತಿ ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯಲ್ಲಿ 10 ಜನ ಸದಸ್ಯರಿರಬೇಕು. ಪ್ರತಿ ತರಗತಿಯಿಂದ ( 4 ರಿಂದ 7/8 ) ಕನಿಷ್ಟ ಇಬ್ಬರು ಮಕ್ಕಳನ್ನು (ಒಬ್ಬ ಬಾಲಕಿ, ಒಬ್ಬ ಬಾಲಕ) ಆಯ್ಕೆ ಮಾಡಬೇಕು. ಆಯ್ಕೆ ಮಾಡಿದ ಹತ್ತು ಜನರಲ್ಲಿ ಒಬ್ಬರನ್ನು ಅಧ್ಯಕ್ಷ ರನ್ನಾಗಿ, ಒಬ್ಬರನ್ನು ಉಪಾಧ್ಯಕ್ಷರನ್ನಾಗಿ ಮತ್ತು ಒಬ್ಬರನ್ನು ಕಾರ್ಯದರ್ಶಿಯನ್ನಾಗಿ ಚುನಾಯಿಸಬೇಕು. ಉಳಿದ ಏಳು ಜನರು ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಾರೆ. ಈ ಸಮಿತಿಗೆ ಶಾಲೆಯ ಮುಖ್ಯ ಗುರುಗಳು ಅಥವಾ ಅವರಿಂದ ನಿಯೋಜನೆಗೊಂಡ ಶಿಕ್ಷಕರು ಮಾರ್ಗದರ್ಶಕರಾಗಿರುತ್ತಾರೆ.

ಈ ಸಮಿತಿಯ ಅವಧಿಯು ಒಂದು ಪೂರ್ಣ ಶೈಕ್ಷಣಿಕ ವರ್ಷ. ಶಾಲಾ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಹೊಸ ಸಮಿತಿಯನ್ನು ಮುಖ್ಯಗುರುಗಳು ಮತ್ತು ಶಾಲಾ ಶಿಕ್ಷಕರು ಮಕ್ಕಳೇ ರಚನೆ ಮಾಡುವಂತೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಬೇಕು. ಈ ಸಮಿತಿಯು ಪ್ರಜಾಪ್ರಭುತ್ವ ಮಾದರಿಯಲ್ಲಿ ರಚನೆಗೊಂಡು ಕಾರ್ಯನಿರ್ವಹಿಸಬೇಕು. ಇದರಿಂದ ಸಮಿತಿಯ ಜವಾಬ್ದಾರಿಯ ಹಸ್ತಾಂತರ ಸುಗಮವಾಗಿ ನಡೆದು ಹೊಸ ಸಮಿತಿಯು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ.

ಸಮಿತಿಯು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ತಿಂಗಳಲ್ಲಿ ಕನಿಷ್ಠ ಒಂದು ಸಲ ಸಭೆ ಸೇರಿ ತನ್ನ ಕಾರ್ಯಯೋಜನೆಯ ಪ್ರಗತಿಯನ್ನು ಪರಿಶೀಲಿಸಬೇಕು. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಕಾರ್ಯನಿರ್ವಹಿಸಬೇಕು. ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದ ವಿಷಯವನ್ನು ಸಭಾ ನಡಾವಳಿ ಪುಸ್ತಕದಲ್ಲಿ ಸಮಿತಿಯ ಕಾರ್ಯದರ್ಶಿ ದಾಖಲಿಸುತ್ತಾರೆ. ಸಭೆಗೆ ಹಾಜರಾದ ಸಮಿತಿಯ ಸದಸ್ಯರುಗಳು ತಮ್ಮ ಹಾಜರಾತಿಯನ್ನು ಸಭಾ ನಡಾವಾಳಿ ಪುಸ್ತಕದಲ್ಲಿ ಸಭೆಯ ಅವಧಿಯಲ್ಲೇ ದಾಖಲಿಸಬೇಕು. ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ಸೂಕ್ತ ಅನುಪಾಲನೆಯೊಂದಿಗೆ ಸಮಿತಿಯು ಅವಗಳನ್ನು ಅನುಷ್ಠಾನಗೊಳಿಸುವಲ್ಲಿ ಕ್ರಿಯಾಶೀಲವಾಗಬೇಕು. ಸಮಿತಿಯ ಪ್ರಗತಿ ವರದಿಯನ್ನು ನಿಗದಿಗೊಳಿಸಿದ ಅವಧಿಯಲ್ಲಿ ಶಾಲಾ ಸಂಸತ್ತಿನ ಸಭೆಯಲ್ಲಿ ಮಂಡಿಸಬೇಕು.

## ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಜವಾಬ್ದಾರಿಗಳು

- ಶಾಲೆಯಲ್ಲಿನ ಕುಡಿಯುವ ನೀರಿನ ಘಟಕ ಹಾಗೂ ಕೈತೊಳೆಯುವ ತೊಟ್ಟಿಗಳ ಸಮರ್ಪಕ ನಿರ್ವಹಣೆ ಮಾಡುವುದು. ನೀರಿನ ಕೊಳವೆ ಮತ್ತು ನಳಗಳು ಹಾನಿಯಾದಲ್ಲಿ ಅಥವಾ ಇವುಗಳಲ್ಲಿ ಸೋರಿಕೆ ಉಂಟಾದಲ್ಲಿ ಕೂಡಲೇ ಶಿಕ್ಷಕರ ಗಮನಕ್ಕೆ ತರುವುದು.



- ಸೂಕ್ತ ಸಂದರ್ಭದಲ್ಲಿ (ಊಟದ ಮೊದಲು, ಶೌಚದ ನಂತರ, ಆಟದ ನಂತರ, ಇತ್ಯಾದಿ) ಸಾಬೂನಿನಿಂದ ಕೈ ಮತ್ತು ಊಟದ ತಟ್ಟೆಗಳನ್ನು ಸ್ವಚ್ಛಗೊಳಿಸುವ ಕುರಿತು ಮಾಹಿತಿ ನೀಡಿ ಸಹಪಾಠಿಗಳಲ್ಲಿ ನೈರ್ಮಲ್ಯದ ಕುರಿತು ಉತ್ತಮ ಅಭ್ಯಾಸಗಳನ್ನು ಪ್ರೇರೇಪಿಸುವುದು.



- ಕೈ ತೋಟಗಳಿಗೆ, ಶೌಚಾಲಯಕ್ಕೆ, ಅಡುಗೆಗೆ ಮತ್ತು ವೈಯಕ್ತಿಕ ಉಪಯೋಗಕ್ಕೆ ನೀರಿನ ಸಮರ್ಪಕ ಬಳಕೆಯ ನಿರ್ವಹಣೆ.



- ನೀರಿನ ಮಿತ ಬಳಕೆ, ನೀರಿನ ಮಹತ್ವ ಮತ್ತು ಕಲುಷಿತ ನೀರಿನಿಂದ ಬರುವ ಕಾಯಿಲೆಗಳ ಬಗ್ಗೆ ಶಾಲಾ ಮಕ್ಕಳಿಗೆ ಮಾಹಿತಿ ಕೊಡುವುದು.




- ಸಹಪಾಠಿಗಳು ಶಾಲಾ ನೈರ್ಮಲ್ಯ ಸೌಲಭ್ಯದ (ಶೌಚಾಲಯ, ಮೂತ್ರಾಲಯ, ಕಸದ ಬುಟ್ಟಿ, ಇತ್ಯಾದಿ) ಸಮರ್ಪಕ ಬಳಕೆ ಮತ್ತು ನಿರ್ವಹಣೆಯನ್ನು ಮಾಡುವಂತೆ ಅವರಲ್ಲಿ ಅರಿವು ಮೂಡಿಸಿ ಪ್ರೇರೇಪಿಸುವುದು.

- ಪ್ರತಿದಿನ ಶಾಲೆಯ ಆವರಣ ಮತ್ತು ಕೊಠಡಿ/ತರಗತಿಗಳ ಸ್ವಚ್ಛತೆಯನ್ನು ನಿಗದಿಗೊಳಿಸಿದ ಮಕ್ಕಳ ತಂಡ ಸಕಾಲದಲ್ಲಿ ನಿರ್ವಹಿಸುವಂತೆ ಮೇಲ್ವಿಚಾರಣೆ ಮಾಡುವುದು




- ಪ್ರತಿದಿನ ಮುಂಜಾನೆ ಪ್ರಾರ್ಥನಾ ಸಮಯದ (School Assembly Hours) ವೇಳೆ ಸಹಪಾಠಿಗಳ ವೈಯಕ್ತಿಕ ಶುಚಿತ್ವದ ಬಗ್ಗೆ ಹೆಚ್ಚಿನ ಗಮನ ನೀಡುವುದು (ನಿಯಮಿತವಾಗಿ ಉಗುರು ಕತ್ತರಿಸುವುದು, ಕೂದಲು ಬಾಚುವುದು, ಪಾದರಕ್ಷೆ ಮತ್ತು ಶುಭ್ರ ಬಟ್ಟೆ ಧರಿಸುವುದು).



- ಹಿರಿಯ ಮಕ್ಕಳು ಕಿರಿಯರಿಗೆ ಸಹಾಯ ಮಾಡುವುದು ಹಾಗೂ ನೀರು, ನೈರ್ಮಲ್ಯ ಮತ್ತು ಶುಚಿತ್ವದ ಸೌಲಭ್ಯಗಳ ಉಪಯೋಗದ ಬಗ್ಗೆ ತಿಳುವಳಿಕೆ ನೀಡುವುದು

- ಸಮಿತಿಯು ಶಾಲೆಯಲ್ಲಿ ನೀರು, ನೈರ್ಮಲ್ಯ ಮತ್ತು ಶುಚಿತ್ವಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಯೋಜನೆಗಳನ್ನು ತಯಾರಿಸಿ ಕಾರ್ಯ ರೂಪಕ್ಕೆ ತರುವುದು.



- ಶಾಲೆಯಲ್ಲಿ ಉತ್ತಮ ಕೈ ತೋಟ ಮತ್ತು ಉದ್ಯಾನವನವನ್ನು ನಿರ್ಮಾಣ ಮಾಡಿ, ಶಾಲಾ ಪರಿಸರವನ್ನು ಉತ್ತಮಪಡಿಸುವುದು.



- ಕೈತೋಟದಲ್ಲಿ ಬೆಳೆದ ತರಕಾರಿ ಮತ್ತು ಸೊಪ್ಪುಗಳನ್ನು ಶಾಲಾ ಬಿಸಿ ಊಟದಲ್ಲಿ ಬಳಸಿಕೊಳ್ಳುವುದು.

- ಊಟ ಮಾಡುವ ಸ್ಥಳ ಸ್ವಚ್ಛವಾಗಿರುವಂತೆ ನೋಡಿಕೊಳ್ಳುವುದು.



- ಶಾಲೆಯಲ್ಲಿ ತ್ಯಾಜ್ಯ ವಿಲೇವಾರಿಯನ್ನು ಒಣ ಕಸ ಮತ್ತು ಹಸಿ ಕಸ (ಶತ್ರು ಕಸ, ಮಿತ್ರ ಕಸ) ಮಕ್ಕಳ ಪಾಲ್ಗೊಳ್ಳುವಿಕೆಯೊಂದಿಗೆ ಸಮರ್ಪಕವಾಗಿ ನಿರ್ವಹಣೆ ಮಾಡಲು ಶಿಕ್ಷಕರಿಗೆ ಸಹಕರಿಸುವುದು.



- ಮಾದರಿ ಶಾಲೆಗಳನ್ನು ಸಂದರ್ಶಿಸಿ ಅಲ್ಲಿನ ಉತ್ತಮ ಅಭ್ಯಾಸ/ಪದ್ಧತಿಗಳನ್ನು ತಮ್ಮ ಶಾಲೆಯಲ್ಲಿ ಅಳವಡಿಸಿಕೋಳ್ಳುಲು ಸಹಪಾಠಿಗಳನ್ನು ಪ್ರೇರೇಪಿಸುವುದು.


- ಈ ಎಲ್ಲಾ ಜವಾಬ್ದಾರಿಗಳನ್ನು ಮಾರ್ಗದರ್ಶಿ ಶಿಕ್ಷಕರ/ಮುಖ್ಯಗುರುಗಳ ಮಾರ್ಗದರ್ಶನದ ಮೇರೆಗೆ ನಿರ್ವಹಿಸುವುದು.

## ಅಪೇಕ್ಷಿತ ಸಕಾರಾತ್ಮಕ ಬದಲಾವಣೆಗಳು

ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯು ತನ್ನ ಜವಾಬ್ದಾರಿಯನ್ನು ಅರಿತು ಅದನ್ನು ಕಾರ್ಯರೂಪಕ್ಕೆ ತಂದಾಗ ಶಾಲೆಯಲ್ಲಿ ಪ್ರಮುಖವಾಗಿ ಕಾಣಬಹುದಾದ ಬದಲಾವಣೆಗಳು.

## ನೀರಿನ ಸದ್ಬಳಕೆ ಮತ್ತು ನಿರ್ವಹಣೆ:


- ಶಾಲೆಯಲ್ಲಿರುವ ನೀರಿನ ಮೂಲವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು.
- ನೀರು ಶೇಖರಣಾ ತೊಟ್ಟಿ (ಟ್ಯಾಂಕ್) ಯನ್ನು ವೇಳಾಪಟ್ಟಿಯಂತೆ ಸ್ವಚ್ಛಗೊಳಿಸುವುದು.
- ನೀರನ್ನು ಪ್ರತಿದಿನ ಶುದ್ಧೀಕರಿಸುವುದು ಮತ್ತು ಮಿತಬಳಕೆ ಮಾಡುವುದು.
- ನೀರು ಪೋಲಾಗದಂತೆ ಕ್ರಮ ಕೈಗೊಳ್ಳುವುದು.
- ಮಕ್ಕಳಲ್ಲಿ ನೀರು ಮತ್ತು ನೀರಿನ ಮೂಲಗಳ ಕುರಿತು ಹೆಚ್ಚಿನ ಅರಿವು ಮೂಡುವುದು.



## ಶೌಚಾಲಯದ ಸಮರ್ಪಕ ಬಳಕೆ ನಿರ್ವಹಣೆ

- ಎಲ್ಲಾ ಮಕ್ಕಳು ಕಡ್ಡಾಯವಾಗಿ ಮಲ ಮೂತ್ರ ವಿಸರ್ಜನೆಗೆ ಶೌಚಾಲಯ/ಮೂತ್ರಾಲಯಗಳನ್ನೇ ಬಳಸುವುದು.
- ಶೌಚಾಲಯ ಬಳಸಿದ ನಂತರ, ಶೌಚಾಲಯವನ್ನು ಸ್ವಚ್ಛಗೊಳಿಸುವುದು
- ನಿಗದಿತ ವೇಳಾಪಟ್ಟಿಯಂತೆ ಶೌಚಾಲಯ ನಿರ್ವಹಣೆ.
- ಶೌಚಾಲಯದ ಸಮೀಪ ಕನ್ನಡಿ, ಬಾಚಣಿಗೆ ಮತ್ತು ಸಾಬೂನಿನ ವ್ಯವಸ್ಥೆ.







## ಮಕ್ಕಳ ವೈಯಕ್ತಿಕ ಶುಚಿತ್ವದಲ್ಲಿ ಉತ್ತಮ ಬದಲಾವಣೆ



- ಉಗುರು ನಿಯಮಿತವಾಗಿ ಕತ್ತರಿಸುವುದು,
- ಪ್ರತಿನಿತ್ಯ ತಲೆ ಬಾಚಿ, ಶುಭ್ರ ಬಟ್ಟೆ ಧರಿಸುವುದು
- ಪ್ರತಿನಿತ್ಯ ಸ್ನಾನ ಮಾಡುವುದು
- ಚಪ್ಪಲಿ ಧರಿಸುವುದು
- ಸೂಕ್ತ ಸಂದರ್ಭದಲ್ಲಿ ಸಾಬೂನಿನಿಂದ ಕೈ ತೊಳೆಯುವುದು.

## ಶಾಲಾ ಕೈತೋಟ ಮತ್ತು ಉದ್ಯಾನವನ ನಿರ್ಮಾಣ ಮತ್ತು ನಿರ್ವಹಣೆ



- ವಿವಿಧ ಬಗೆಯ ಗಿಡಗಳನ್ನು ಬೆಳೆಸಿ ಶಾಲೆಯ ಸೌಂದರ್ಯವನ್ನು ಹೆಚ್ಚಿಸುವುದು.
- ವಿವಿಧ ಬಗೆಯ ಸೊಪ್ಪು ತರಕಾರಿ ಬೆಳೆಯುವುದು ಮತ್ತು ಮನೆಯ ಅಂಗಳದಲ್ಲಿ ಕೈ ತೋಟದ ನಿರ್ಮಾಣದ ಹವ್ಯಾಸ ಬೆಳೆಸಿಕೊಳ್ಳುವುದು.

## ತ್ಯಾಜ್ಯ ವಿಲೇವಾರಿ



- ಶಾಲೆಯಲ್ಲಿ ಕಸದ ಬುಟ್ಟಿ ಬಳಕೆ ಮಾಡುವುದು.
- ದ್ರವ ತ್ಯಾಜ್ಯದಿಂದ ಶಾಲಾ ಕೈತೋಟದ ನಿರ್ವಹಣೆ ಮಾಡುವುದು ಹಾಗೂ ಸಾವಯವ ಘನ ತ್ಯಾಜ್ಯದಿಂದ ಗೊಬ್ಬರ ತಯಾರಿಸಿ ಕೈತೋಟಕ್ಕೆ ಬಳಸುವುದು.
- ಕೊಳೆಯುವ ಕಸ ಮತ್ತು ಕೊಳೆಯದ ಕಸವನ್ನು ವಿಂಗಡನೆ ಮಾಡಿ ಸೂಕ್ತ ವಿಲೇವಾರಿ ಮಾಡುವುದು.

## ಮಕ್ಕಳ ವೈಯಕ್ತಿಕ ಶುಚಿತ್ವ ಪರಿಶೀಲನಾ ನಮೂನೆ

ಶಾಲೆಯ ಹೆಸರು:

ಕಾರ್ಯಕ್ರಮ ಮೇಲ್ವಿಚಾರಕರ/ಶಿಕ್ಷಕರು/ಕಾರ್ಯಕ್ರಮ ಸಂಯೋಜಕರು ಹೆಸರು:

ಮಕ್ಕಳ ಒಟ್ಟು ಸಂಖ್ಯೆ: ಗಂಡು: ಹೆಣ್ಣು:

ಪರಿಶೀಲನಾ ದಿನಾಂಕ:

| ಮಕ್ಕಳ ವೈಯಕ್ತಿಕ ಶುಚಿತ್ವ | | (ಸಂಖ್ಯೆಗಳನ್ನು ಉಪಯೋಗಿಸಿ) | | | | |
|---|---|---|---|---|---|---|
| ಕ್ರ.ಸಂ. | ಚಟುವಟಿಕೆ<br>ದಿನಾಂಕ | 1ನೇ ವಾರ | 2ನೇ ವಾರ | 3ನೇ ವಾರ | 4ನೇ ವಾರ | % ಸರಾಸರಿ |
| 1. | ವಾರಕ್ಕೊಮ್ಮೆ ಉಗುರು ಕತ್ತರಿಸುವುದು | | | | | |
| 2. | ಶುಭ್ರ ಸಮವಸ್ತ್ರ ಧರಿಸುವುದು | | | | | |
| 3. | ಕೂದಲು ಬಾಚಿಕೊಳ್ಳುವುದು | | | | | |
| 4. | ಪ್ರತಿ ದಿನ ಹಲ್ಲು ಉಜ್ಜುವುದು | | | | | |
| 5. | ಪ್ರತಿ ದಿನ ಚಪ್ಪಲಿ/ಶೂ ಧರಿಸುವುದು | | | | | |
| 6. | ಪ್ರತಿ ದಿನ ಕರವಸ್ತ್ರ ಉಪಯೋಗಿಸುವುದು | | | | | |
| 7. | ಸೂಕ್ತ ಸಂದರ್ಭದಲ್ಲಿ ಸಾಬೂನಿನಿಂದ ಕೈ ತೊಳೆದು ಕೊಳ್ಳುವುದು | | | | | |
| 8. | ಶಾಲೆಯಲ್ಲಿ ಮೂತ್ರಾಲಯ/ ಶೌಚಾಲಯದ ಬಳಕೆ ಮಾಡುವುದು | | | | | |
| 9. | ತರಗತಿ ಕೋಣೆಯಲ್ಲಿ ಕಸದ ಬುಟ್ಟಿಯ ಬಳಕೆ ಮಾಡುವುದು | | | | | |

| ಸಹಿ | ಸಹಿ | ಸಹಿ |
|---|---|---|
| **ಮುಖ್ಯಗುರುಗಳು/ ಶಿಕ್ಷಕರು** | **ಅಧ್ಯಕ್ಷರು, ಶಾಲಾ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ** | **ಕಾರ್ಯಕ್ರಮ ಮೇಲ್ವಿಚಾರಕರು** |

## ಶೌಚಾಲಯದ ಸಮರ್ಪಕ ಬಳಕೆಯ ನಿರ್ವಹಣಾ ನಮೂನೆ

ಪರಿಶೀಲಿಸಿದ ವಿಧ್ಯಾರ್ಥಿಯ ಹೆಸರು:

ದಿನಾಂಕ: ನಮೂನೆಯ ಸಂಖ್ಯೆ:

| ಈ ದಿನದ ನಮ್ಮ ಶಾಲೆಯ ನೈರ್ಮಲ್ಯದ ಸ್ಥಿತಿ | ಅತ್ಯುತ್ತಮ 3 | ಉತ್ತಮ 2 | ತೃಪ್ತಿಕರ 1 | ಅತೃಪ್ತಿಕರ 0 |
|---|---|---|---|---|
| ಬಾಲಕಿಯರ ಶೌಚಾಲಯದ/ ಮೂತ್ರಾಲಯದ ಪ್ಯಾನ್‌ಗಳು ಶುಚಿತ್ವದ ಮಾನದಂಡಗಳ ಪ್ರಕಾರ ಸ್ವಚ್ಛವಾಗಿದೆ. | | | | |
| ಹುಡುಗರ ಶೌಚಾಲಯದ/ಮೂತ್ರಾಲಯದ ಪ್ಯಾನ್‌ಗಳು ಶುಚಿತ್ವದ ಮಾನದಂಡಗಳ ಪ್ರಕಾರ ಸ್ವಚ್ಛವಾಗಿದೆ. | | | | |
| ನಿಮ್ಮ ಶಾಲಾ ಆವರಣದ ಸ್ವಚ್ಛತೆಯನ್ನು ಹೇಗೆ ಪ್ರಮಾಣೀಕರಿಸುತ್ತೀರಿ. | | | | |
| ಕುಡಿಯುವ ನೀರು ಮತ್ತು ಶುಚಿತ್ವ | | | | |
| ಕೈ ಹಾಗೂ ಪಾತ್ರೆ ತೊಳೆಯುವ ಸ್ಥಳ | | | | |
| ಬಿಸಿಯೂಟದ ಕೋಣೆ | | | | |
| ಕಛೇರಿ, ವರ್ಗ, ಹಾಲ್, ಆಟದ ಮೈದಾನ, ವಾಹನ ನಿಲುಗಡೆ ಪ್ರದೇಶ | | | | |
| ವರಾಂಡ, ಮೆಟ್ಟಿಲುಗಳು, ಮೆಲ್ಛಾವಣಿ | | | | |

ಸಹಿ

**ಪರಿಶೀಲಿಸಿದ ವಿದ್ಯಾರ್ಥಿ**

ಸಹಿ

**ಕಾರ್ಯಕ್ರಮ ಮೇಲ್ವಿಚಾರಕರು**



TATA AIG INSURANCE
WITH YOU ALWAYS

Kalike
EMPOWERING PEOPLE • IMPROVING LIFE
An Initiative of TATA TRUSTS

TATA WATER MISSION
A TATA TRUSTS INITIATIVE